# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಮೂಡಲಗಿ.

ಸಿ.ಸಿ. ನಂಃ 475/2014

ಸಿ.ಡಬ್ಲ್ಯೂ- 10
ಪಿ.ಡಬ್ಲ್ಯೂ- 8

**ದಿನಾಂಕಃ 03-07-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿದಾರರ ಹೆಸರು | : ಪಂಚನಗೌಡ ಮುದಿಗೌಡರ |
| ತಂದೆಯ/ಗಂಡನ ಹೆಸರು | : ಮಹಾದೇವಗೌಡ |
| ವಯಸ್ಸು | : 59 ವರ್ಷ |
| ಉದ್ಯೋಗ | : CA Vijay Panchappa & Co., DWD |
| ವಾಸ ಸ್ಥಳ | : ಧಾರವಾಡ |
| ತಾಲೂಕು | : ಧಾರವಾಡ |

**ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ ರವರಿಂದ:-**

ನಾನು 2007 ರಿಂದ ಈ ದಿನದವರೆಗೂ Vijay Panchappa & Co., CA ಪಾಲುದಾರನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ನಾನು ಬಲಭೀಮ ವಿದ್ಯಾಸಂಸ್ಥೆಯ ಶ್ರೀ ಕೆಳಕರ ಪ್ರೌಢ ಶಾಲೆ ಕುಲಗೋಡ 2003-04 ರಿಂದ ಲೆಕ್ಕ ಪರಿಶೋಧನೆ ಮಾಡುತ್ತಿದ್ದು, 2003-04 ರಿಂದ ಸದರಿ ವಿದ್ಯಾಸಂಸ್ಥೆಯ ಲೆಕ್ಕ ಪರಿಶೋಧನೆ ಆಗಿರಲಿಲ್ಲ ಹಾಗಾಗಿ 2010 ರಲ್ಲಿ ನಮ್ಮ ಕಂಪನಿಯಿಂದ 2003-04 ರಿಂದ 2008-09 ರವರೆಗಿನ ಲೆಕ್ಕ ಪರಿಶೋಧನೆ ಮಾಡಿ report ಸಲ್ಲಿಸಿರುತ್ತೇನೆ. ಸಾಕ್ಷಿಯು 2003-04 ರಿಂದ 2007-08 ರವರೆಗಿನ ಲೆಕ್ಕ ಪರಿಶೋಧನೆ report ಗಳ zerox ಪ್ರತಿಗಳನ್ನು ನೋಡಿ ಗುರುತಿಸಿರುತ್ತಾರೆ. ಅಸಲು ಲೆಕ್ಕ ಪರಿಶೋಧನೆ report ಗಳನ್ನು CC No. 437/2014 ಪ್ರಕರಣದಲ್ಲಿ ಒಟ್ಟಾಗಿ ನಿಪಿ-20 ಎಂದು, ಸಾಕ್ಷಿಯ ಸಹಿಯನ್ನು ನಿಪಿ-20(ಎ) ಎಂದು ಗುರುತಿಸಲಾಗಿದೆ.

2005-06 ರ ಬಲಭೀಮ ವಿದ್ಯಾಸಂಸ್ಥೆಯ ಕೆಳಕರ ಪ್ರೌಢ ಶಾಲೆಯ ಲೆಕ್ಕ ಪರಿಶೋಧನೆ ಮಾಡುವ ಸಂದರ್ಭದಲ್ಲಿ cash book ನಲ್ಲಿ ಖರ್ಚು ತೋರಿಸಿದ್ದು ಸದರಿ ಖರ್ಚಿಗೆ ಸಂಬಂಧಿಸಿದಂತೆ ಯಾವುದೇ vouchers ಇಲ್ಲದೇ ಇರುವ ಒಟ್ಟು ಹಣ ರೂ.48,787/-, 2006-07 ರಲ್ಲಿ cash book ನಲ್ಲಿ ಖರ್ಚು ತೋರಿಸಿದ್ದು ಸದರಿ ಖರ್ಚಿಗೆ ಸಂಬಂಧಿಸಿದಂತೆ ಯಾವುದೇ vouchers ಇಲ್ಲದೇ ಇರುವ ಒಟ್ಟು ರೂ.cash book ನಲ್ಲಿ ಖರ್ಚು ತೋರಿಸಿದ್ದು ಸದರಿ ಖರ್ಚಿಗೆ ಸಂಬಂಧಿಸಿದಂತೆ ಯಾವುದೇ vouchers ಇಲ್ಲದೇ ಇರುವ ಒಟ್ಟು ಹಣ ರೂ.6,460/, 2007-08 ರಲ್ಲಿ cash book ನಲ್ಲಿ ಖರ್ಚು ತೋರಿಸಿದ್ದು ಸದರಿ ಖರ್ಚಿಗೆ ಸಂಬಂಧಿಸಿದಂತೆ ಯಾವುದೇ vouchers ಇಲ್ಲದೇ ಇರುವ ಒಟ್ಟು ಹಣ ರೂ.12,222/-, 2008-09 ರಲ್ಲಿ cash book ನಲ್ಲಿ ಖರ್ಚು ತೋರಿಸಿದ್ದು ಸದರಿ ಖರ್ಚಿಗೆ ಸಂಬಂಧಿಸಿದಂತೆ ಯಾವುದೇ

vouchers ಇಲ್ಲದೇ ಇರುವ ಒಟ್ಟು ಹಣ ರೂ.3,853/- ತೋರಿಸಿರುತ್ತಾರೆ. Cash book ನ closing balance ನಲ್ಲಿ Government ಖಾತೆಯಲ್ಲಿ ರೂ.69,189.26, non-government ಖಾತೆಯಲ್ಲಿ ರೂ. 32,389.80 ತೋರಿಸಿದ್ದು ಒಟ್ಟು ರೂ.1,72,901.06 ಹಣದ ಪೈಕಿ 2015-16 ರಲ್ಲಿ ರೂ.39,630 ಗಳಿಗೆ ದಾಖಲಾತಿಗಳನ್ನು ಒದಗಿಸಿದ್ದು, ಸದರಿ ದಾಖಲಾತಿಗಳನ್ನು 2015-16 ರ ಲೆಕ್ಕ ಪರಿಶೋಧನೆಯಲ್ಲಿ ಪರಿಗಣಿಸಿ ಒಟ್ಟು ದುರುಪಯೋಗದ ಹಣ ರೂ.1,33,271.06 ನ್ನು balance sheet ನಲ್ಲಿ ಪರಿಗಣಿಸಿ ವರದಿ ಸಲ್ಲಿಸಿರುತ್ತೇನೆ. ಪ್ರಕರಣದ ವಿಚಾರವಾಗಿ ನಾನು ತನಿಖಾಧಿಕಾರಿಗೆ ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ Sri.ACD ವಕೀಲರಿಂದಃ**

ನಾನು 1995 ರಲ್ಲಿ ನನ್ನ CA ಪೂರ್ಣಗೊಳಿಸಿದ್ದು ರೆಜಿಸ್ಟರ ಮಾಡಿಸಿರುತ್ತೇನೆ. ನಾನು ಅಡಿಟ್ ಮಾಡಿದ ಪ್ರತಿ ವರದಿಯಲ್ಲಿ ನನ್ನ ಹೆಸರಿನ ಸಹಿತ membership number ನ್ನು ನಮೂದಿಸಬೇಕು ಎಂದರೆ ಸರಿ. ನಾನು ಬಲಭೀಮ ವಿದ್ಯಾಸಂಸ್ಥೆಯ ಕೆಳಕರ ಪ್ರೌಢ ಶಾಲೆಯ ಲೆಕ್ಕ ಪರಿಶೋಧನೆ ಮಾಡಿ ಸಲ್ಲಿಸಿದ ಪ್ರತಿ ವರದಿಯಲ್ಲಿ ನನ್ನ membership number ನ್ನು ನಮೂದಿಸಿರುತ್ತೇನೆ. ನಾನು Vijay Panchappa & Co., CA ಪಾಲುದಾರನಾಗಿ 2007 ರಲ್ಲಿ ಸೇರಿಕೊಂಡಿರುತ್ತೇನೆ. ನಾನು Vijay Panchappa & Co. ಯಲ್ಲಿ ಇನ್ನೊಬ್ಬ ವ್ಯಕ್ತಿಯ ಜೊತೆ CA ಪಾಲುದಾರನಾಗಿ join ಆಗಿದ್ದು partnership ಅನ್ನು Partnership Act ಅಡಿಯಲ್ಲಿ register ಮಾಡಿರುವುದಿಲ್ಲ. ನಾನು ತನಿಖಾಧಿಕಾರಿಗೆ ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ ಹೇಳಿಕೆ ಕೊಡುವಾಗ ನನ್ನ partnership ಬೇರೊಬ್ಬ CA ಜೊತೆ ಆಗಿದ್ದು ಸದರಿ partnership ನ್ನು register ಮಾಡಿರುವುದಿಲ್ಲ ಎಂದು ಹೇಳಿರುವುದಿಲ್ಲ.

Vijay Panchappa & Co., CA ಪಾಲುದಾರನಾಗಿ partnership ಅಡಿಯಲ್ಲಿ register ಮಾಡಲು ಈಗಲೂ ಯಾವುದೇ ತೊಂದರೆ ಇಲ್ಲ ಎಂದರೆ ಸರಿ. Vijay Panchappa & Co. un-register ಇರುವುದರಿಂದ ಸಹಕಾರ ಸಂಘಗಳ ಅಡಿಯಲ್ಲಿ register ಆದ ಯಾವುದೇ ಸಂಸ್ಥೆಗಳ ಲೆಕ್ಕ ಪರಿಶೋಧನೆ ಮಾಡಲು ನಮ್ಮ ಕಂಪನಿಗೆ ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ.

ಚಾಸಾ 4 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಬಲಭೀಮ ವಿದ್ಯಾಸಂಸ್ಥೆಯ ಕೆಳಕರ ಪ್ರೌಢ ಶಾಲೆಯ ಲೆಕ್ಕ ಪರಿಶೋಧನೆ ತಾನೇ ಮಾಡಿರುವುದಾಗಿ ನುಡಿದಿರುತ್ತಾರೆಂದರೆ ನಮ್ಮ ವ್ಯವಸ್ಥೆಯ ಅಡಿಯಲ್ಲಿ assistant ಗಳಿಂದ ಲೆಕ್ಕ ಪರಿಶೋಧನೆ ಮಾಡಿಸಿ ಸದರಿ ಲೆಕ್ಕ ಪರಿಶೋಧನೆಯನ್ನು ನಾವು verify ಮಾಡಿ

ಸಹಿ ಮಾಡಿರುತ್ತೇನೆ. ನಾನು ದಿಃ 28.05.2010 ರಂದು audit report ನ್ನು ಬಲಭೀಮ ವಿದ್ಯಾಸಂಸ್ಥೆಗೆ ಸಲ್ಲಿಸಿರುತ್ತೇನೆ. ನಿಪಿ-13 ರಲ್ಲಿ ನಮೂದಿಸಿರುವಂತೆ ಸರಕಾರಿ ನಗದು ಪುಸ್ತಕ 1 ದಿಃ 01-12-2003 ರಿಂದ 31-03-2006 ರವರೆಗೆ ಇದ್ದು, ಅರೆ ಸರಕಾರಿ ನಗದು ಪುಸ್ತಕ 1 ದಿಃ 01-04-2004 ರಿಂದ 31-03-2008 ರವರೆಗೆ ಇದ್ದು, ಸರಕಾರಿ ನಗದು ಪುಸ್ತಕ 1 ದಿಃ 01-04-2006 ರಿಂದ 31-03-2008 ರವರೆಗೆ ಇದ್ದು ಇವುಗಳನ್ನು ತನಿಖಾಧಿಕಾರಿ ದಿಃ 10.12.2011 ರಂದು ಜಪ್ತು ಮಾಡಿರುತ್ತಾನೆಂದರೆ ಸಾಕ್ಷಿಯು ನಿಪಿ-13 ನ್ನು ನೋಡಿ ಹೌದು ಎಂದು ಒಪ್ಪಿಕೊಳ್ಳುತ್ತಾರೆ. ಮೇಲೆ ಹೇಳಿದ 3 register ಗಳು ನನ್ನ audit report ಸಲ್ಲಿಸಿದ 15 ತಿಂಗಳ ವರೆಗೂ ಶಿವಯೋಗಪ್ಪ ಪರುಶೆಟ್ಟಿ ಎಂಬುವವರ ಕಬ್ಜೆಯಲ್ಲಿದ್ದವು ಎಂದರೆ ನನಗೆ ಮಾಹಿತಿ ಇರುವುದಿಲ್ಲ. ಮೇಲೆ ಹೇಳಿದ 3 register ಗಳಲ್ಲಿ ನಾನು ಪರಿಶೀಲಿಸದೇ ಲೆಕ್ಕ ಪರಿಶೋಧನೆ ಮಾಡಿ audit report ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ಮೇಲೆ ಹೇಳಿದ 3 register ಗಳು ಶಿವಯೋಗಪ್ಪ ಪರುಶೆಟ್ಟಿ ಎಂಬುವವರ ಕಬ್ಜೆಯಲ್ಲಿದ್ದರಿಂದ ಆತ ಸದರಿ register ಗಳಲ್ಲಿ ತಿದ್ದಿ ಅಕೌಂಟ್ಸಗಳನ್ನು ತನಗೆ ಬೇಕಾದ ಹಾಗೇ ಬರೆದಿರುತ್ತಾನೆಂದರೆ ನನಗೆ ಮಾಹಿತಿ ಇರುವುದಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಸಮಯ ಕೋರಿದ್ದು ನ್ಯಾಯಯುತವಾದ ದೃಷ್ಟಿಯಿಂದ ಸಮಯ ನೀಡಲಾಯಿತು.**

ಗಣಕೀಕರಿಸಿ ಓದಿ ಹೇಳಿ ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.

ಪ್ರ. ದ. ನ್ಯಾ ದಂ.,
ಮೂಡಲಗಿ.